

‘ಸರಿ ನೀನು ಹೋಗು...’ ಉದ್ವೇಗಕ್ಕೊಳಗಾದ ರಾಜೀವ. ಏಕಾಂಗಿತನದ ಪರಿಣಾಮವಿರಬಹುದೆ ಇದು? ಹೀಗೆಯೇ ಬಿಟ್ಟರೆ ಮುಂದೇನು? ನೋಡಿದವರು ಏನು ಭಾವಿಸಬಹುದು?

ಮನೋಹರನನ್ನು ಸಂಪರ್ಕಿಸಿದ ರಾಜೀವ. ವೈದ್ಯನಂತಲ್ಲದೆ ಗೆಳೆಯನಾಗಿ ಭೇಟಿಗೆ ಬಂದ ಮನೋಹರನೊಂದಿಗೆ ಹರಟೆ ಹೊಡೆದರೂ ಅಮ್ಮ ಆ ಮಾತುಕತೆಗಳಲ್ಲಿ ಸಹಜತೆಯಲ್ಲದೆ ಬೇರೇನೂ ಇಲ್ಲ... ಆದರೆ ಮಲಗುವ ಕೋಣೆ ಹೊಕ್ಕ ತಕ್ಷಣ ಮಾತಿಗೆ ಯಾರೂ ಬೇಕಾಗಿಲ್ಲ. ಸಂಭಾಷಣೆ ಆರಂಭವಾಗಿ ಬಿಡುತ್ತದೆ.

ಗೆಳೆಯರಿಬ್ಬರಲ್ಲಿ ಚರ್ಚೆ ನಡೆಯಿತು. ‘ಚಿಂತೆಗೆ ಕಾರಣವಿಲ್ಲ ರಾಜೀವ’, ಗೆಳೆಯನ ಭುಜ ತಟ್ಟಿ ಭರವಸೆ ನೀಡಿದ ಮನೋಹರ. ಈ ವಯೋಮಾನ ಜತೆಗಾಗಿ ಹಂಬಲಿಸುತ್ತಿರುತ್ತದೆ... ಇಳಿತವನ್ನೂ ಒಬ್ಬರೇ ಅನುಭವಿಸುವುದು ಸುಲಭವಲ್ಲ. ಅಂಥದ್ದರಲ್ಲಿ ‘ಅವರು’ ಜೊತೆಗಿದ್ದಾರೆ ಎನ್ನುವ ಭರವಸೆಯನ್ನು ಹಿಡಿದು ಜೀವ ನೆಮ್ಮದಿಗಾಗುತ್ತದೆ. ಹಾಗೆ ಔಷಧಿಯ ಅಗತ್ಯ ಸದ್ಯಕ್ಕೆ ಕಾಣುತ್ತಿಲ್ಲ. ಸ್ಥಳ ಬದಲಾವಣೆ ಇಂಥದ್ದಕ್ಕೆಲ್ಲ ಬಹಳ ಉತ್ತಮ. ಕೆಲವು ದಿನ ನಿನ್ನೊಂದಿಗೆ ಅಮ್ಮನನ್ನು ಕರೆದುಕೊಂಡು ಹೋಗು. ಅಲ್ಲಿದ್ದರೆ ಶೀ ಮೇ ಫರ್ಗೆಟ್ ಅಬೌಟ್ ದೀಸ್ ಥಿಂಗ್ಸ್ ಹಾಗೂ ತೊಂದರೆ ಆದರೆ ನಾನಿದ್ದೇ ಇದ್ದೀನಲ್ಲ ನೋಡೋಣ’.

‘ನಾನೂ ಅದನ್ನೇ ಯೋಚಿಸಿದ್ದೇನೆ. ಆದರೆ ಅಮ್ಮ ಬರಲು ಸಿದ್ಧಳಿಲ್ಲ...’ ರಾಜೀವ ಚಿಂತಿತನಾಗಿದ್ದ. ‘ಮತ್ತೆ ಪ್ರಯತ್ನಿಸು. ಅದಕ್ಕಿಂತ ಬೇರೆ ಉಪಾಯವಿಲ್ಲ.’

***

‘ಅಮ್ಮ ಈ ತಿಂಗಳ ಇಪ್ಪತ್ತೊಂಬತ್ತನೆಯ ತಾರೀಕು ನಾವೆಲ್ಲಾ ಹೊರಡ್ತಾ ಇದ್ದೀವಿ ಲಂಡನ್ನಿಗೆ... ನೀನೂ’, ಪರೀಕ್ಷಾರ್ಥ ದೃಷ್ಟಿಹರಿಸಿದ ರಾಜೀವ. ಮಾತನಾಡದೆ ಕೈಯೊಳಗಿದ್ದ ಬೀಡಾವನ್ನು ಅವನ ಕೈಗಿಟ್ಟು ‘ತೊಗೋ ತಿನ್ನು. ನಿನಗಾಗಿ ಲವಂಗ ಏಲಕ್ಕಿ ಜಾಯಪತ್ರೆ, ಕೊಬ್ಬರಿ ಎಲ್ಲಾ ಹಾಕಿ ತಯಾರಿಸಿದ್ದೀನಿ... ಶ್ರಾವಣೀ ನೀನೂ ಹಿಡಿ...’ ಎಂದು ಮುಗುಳ್ನಕ್ಕರು.

‘ಅಮ್ಮ ಮತ್ತೆ ಮಾತು ತಪ್ಪಿಸ್ತಾ ಇದ್ದೀಯ’ ಪುಟ್ಟ ಹುಡುಗನಂತೆ ಅವರ ಕೊರಳ ಸುತ್ತ ಕೈಹಾಕಿದ. ‘ಒಂದು ಅಥವಾ ಎರಡು ತಿಂಗಳು ಅಷ್ಟೆ, ಮತ್ತೆ ಬಂದು ಬಿಡುವೆಯಂತೆ ಆಗಬಹುದೆ...’ ಅನುನಯಿಸಿದ.

ಈ ಉಪಾಯವನ್ನು ಹೇಳಿಕೊಟ್ಟವಳು ಶ್ರಾವಣಿ ‘ಕೆಲವೇ ದಿನ ಎಂದು ಹೇಳಿ ಒಪ್ಪಿಸಿ ಕರೆದೊಯ್ಯೋಣ ಅವರನ್ನು, ಮುಂದಿನದನ್ನು ಅನಂತರ ಯೋಚಿಸಬಹುದು’.’ ತನಗೂ ಅದು ಸರಿಯೆನಿಸಿತ್ತು.

ಅಮ್ಮನ ಮೃದು ಉತ್ತರ ಬಂತು. ‘ಯೋಚಿಸಿ ಹೇಳ್ತೀನಿ, ಅಲ್ಲಿಯವರೆಗೆ ನೀವು ಶ್ರಾವಣಿಯ ಅಮ್ಮನ ಮನೆಗೆ ಹೋಗಿ ಬನ್ನಿ’, ಭರವಸೆಯನ್ನು ಬೊಗಸೆಯಲ್ಲಿ ಹಿಡಿದು ಎದ್ದು ಹೋದ ಮಗನನ್ನೇ ಹಿಂದಿನಿಂದ ನೋಡಿದರು.

ಈ ಮನೆಯಲ್ಲಿ ಊರಿಕೊಂಡಿವೆ ತನ್ನ ಬೇರುಗಳು, ಅವರೊಟ್ಟಿಗೆ ಆಳದಾಳಕ್ಕೆ ಇಳಿದಿವೆ. ಲಂಗದಾವಣಿಯ ಹದಿನಾಲ್ಕರ ಪೋರಿ ಎಂಟು ಮೊಳದ ಸೀರೆಯಲ್ಲಿ ನೆಟ್ಟಗೆ ನಡೆಯಲೂ ಬಾರದೆ ತಡವರಿಸಿ ಹೆಜ್ಜೆಯಿಟ್ಟು ಈ ಹೊಸ್ತಿಲಿನ ಸೇರಕ್ಕೆ ತಳ್ಳಿ ಬಂದ ದಿನದಿಂದ... ವರ್ಷಗಳ ಲೆಕ್ಕವಿಲ್ಲ ಅದಕ್ಕೆ. ‘ನಿನ್ನೊಂದಿಗೆ ನಾನು ಎಂದೆಂದಿಗೂ ಇದ್ದೇನೆ’ ಎಂದು ಕೈಯಲ್ಲಿ ಕೈಯಿಟ್ಟು ಹೇಳಿದ ಅವರನ್ನು ನೀಲಿ ಬಾನು ಕರೆದೊಯ್ದದ್ದನ್ನು ಜಗತ್ತು ಕಂಡಿತ್ತಷ್ಟೆ. ‘ಎಲ್ಲಿ ಹೋದರವರು? ಇಲ್ಲಿ ಇದ್ದಾರೆ... ಈ ಮನೆಯ ಅಣುಅಣುವಿನಲ್ಲಿ... ಗಾಳಿಯಲೆಯಲ್ಲಿ, ನೀರಿನ ಹನಿಗಳಲ್ಲಿ. ನಾನು ಎದ್ದು ಎಲ್ಲೋ ದೂರದೇಶಕ್ಕೆ ನಡೆದರೆ ಅವರೇನು ಮಾಡಬೇಕು?’

ಮೋಹಿತನಿಗೆ ಚೆಂಡಾಟದ ಹುಮ್ಮಸ್ಸು ಉಕ್ಕುತ್ತದೆ. ವಿಶಾಲವಾದ ಅಂಗಳ ಪೋರ್ಟಿಕೋದ ಮುಂಭಾಗದುದ್ದಗಲಕ್ಕೂ ಬೆಳೆಸಿದ ಹುಲ್ಲುಹಾಸು ಚೆಂಡನ್ನು ಚಿಮ್ಮಿಯಾಡಲು ಪ್ರಶಸ್ತವಾಗಿದೆ. ದೊಡ್ಡ ಕಬ್ಬಿಣದ ಗೇಟನ್ನು ಮುಚ್ಚಿಬಿಟ್ಟರೆ ಮುಗಿಯಿತು. ನಿಶ್ಚಿಂತೆಯಾಗಿ ಆಡಲು ಬಿಡಬಹುದು. ಮಿಕ್ಕಿ ಮೋಹಿತನ ಜತೆಯಾಟಗಾರ... ಕೌತುಕದಿಂದ ಕೂತು ನೋಡಿದರು ಅಮ್ಮ. ಮಿಕ್ಕಿಯಷ್ಟೇ ಪಾದರಸದ ವೇಗದಲ್ಲಿ ಚಲಿಸುತ್ತ ಚೆಂಡನ್ನೆಸೆಯುತ್ತದೆ ಮಗು, ಒಮ್ಮೆ ಇಲ್ಲಿ ಒಮ್ಮೆ ಅಲ್ಲಿ ಅಗೋ ಆ ಕಡೆಗೆ... ಮಧ್ಯದಲ್ಲಿ ಯಾರವರು?! ಅರೆ, ಅವರೇ! ತಾವೂ ಚೆಂಡನ್ನು ದೂಡುತ್ತಿದ್ದಾರೆ. ಮೊಮ್ಮಗನೊಂದಿಗೆ ಮಗುವಿನಂತೆ ಜಿಗಿಜಿಗಿದು ಓಡಾಡಿ ಸಂಭ್ರಮಿಸುತ್ತಿದ್ದಾರೆ. ಶುದ್ಧ ಮಗು... ಅಮ್ಮ ನಕ್ಕರು. ಪುಟಿ ಪುಟಿದು ಉರುಳುತ್ತಿದೆ ಚೆಂಡು. ಅಲ್ಲಿ ಇಲ್ಲಿ ಅಗೋ ಅರೆರೆ ಅರೆರೆ ಕಬ್ಬಿಣದ ಗೇಟಿನಡಿ ತೂರಿ ಆಚೆ ಬಿದ್ದು ಬಿಟ್ಟಿತಲ್ಲ... ಯಾರಾದರೂ ಎತ್ತಿಕೊಡಬೇಕು ಚನ್ನಪ್ಪ ಇಲ್ಲ, ಪೇಟೆಗೆ ಹೋಗಿದ್ದಾನೆ. ಅವರೇ ಗೇಟಿನತ್ತ ಓಡಿದರಲ್ಲ ಚೆಂಡು ತೆಗೆಯಲು... ಯಾಕಿಷ್ಟು ಕಷ್ಟಪಡುತ್ತಿದ್ದಾರೆ... ಅವರ ಕೈ ಗೇಟಿನ ಮಿತಿಯಿಂದಾಚೆಗೆ ಚಲಿಸುತ್ತಿಲ್ಲ... ಗಾಬರಿ ಹೆಚ್ಚಿ ಅಮ್ಮನೆದೆ ಧಡಧಡನೆ ಡವಗುಟ್ಟಿತು. ಗೇಟಿಗೆ ತಗುಲಿ ಈಚೆಗೆ ಯಾರೋ ದೂಡಿದಂತೆ ಧಡಾರನೆ ಸರಿದು ಬರುತ್ತಿದ್ದಾರೆ ಅವರು ಅಂದರೆ?! ಈ ಅಂಗಳದಿಂದಾಚೆಗೆ ಅವರು ಚಲಿಸಲಾರರೆ... ಈ ಮನೆ, ಈ ಆವಾರದಲ್ಲಿ ಮಾತ್ರವೆ ಅವರ ಅಸ್ತಿತ್ವವೆ?

ಆ ವಿಷಣ್ಣವದನದಲ್ಲಿ ಅಚ್ಚೊತ್ತಿದ ನಿರಾಸೆಯನ್ನಳೆಯಲಾಗುತ್ತಿಲ್ಲ... ಮುಂದಿನ ಕ್ಷಣದಲ್ಲಿ ಮಿಕ್ಕಿ, ಮಗು ಇಬ್ಬರೇ ಉಳಿದರಲ್ಲಿ.

***

ನಾಳೆಯೇ ಪ್ರಯಾಣ. ಸಿದ್ಧತೆಗಳೆಲ್ಲ ಮುಗಿದಿವೆ. ಅಮ್ಮನ ಬ್ಯಾಗಿಗೆ ಬಟ್ಟೆ ತುಂಬುವುದೊಂದೇ ಬಾಕಿ. ನಾನು ಮರಳಿ ಬರುವುದು ಯಾವಾಗ? ಅಮ್ಮನ ಕೈಯಿಂದ ಯಾಂತ್ರಿಕವಾಗಿ ಒಂದೊಂದೇ ವಸ್ತುಗಳಿಂದ ಬ್ಯಾಗು ತುಂಬಿಕೊಳ್ಳುತ್ತಿದೆ.

‘ಹೇ ಇದನ್ನೂ ಒಯ್ಯಿ’ ಅವರು ಕಪ್ಪು ರೇಷ್ಮೆ ಸೀರೆಯನ್ನು ತೋರಿಸಿ ಹೇಳಿದರು.

‘ಕಳೆದ ವಾರವಿಡೀ ನಾನೆಷ್ಟು ಒದ್ದಾಡಿದೆಗೊತ್ತೆ? ಎಲ್ಲಿದ್ದಿರಿ?’ ಅಮ್ಮನ ಸ್ವರದಲ್ಲಿ ನೋವು ಕೋಪಗಳಿವೆ.

‘ನಾನೆಲ್ಲಿಗೆ ಹೋಗ್ತೀನಿ ಹೇಳು... ನಾನು ಹೋಗುವುದು ಸಾಧ್ಯವೆ...’

‘ಮತ್ತೆ ಯಾಕೆ ಬರಲಿಲ್ಲ’ ಅವರಿಂದ ಉತ್ತರವಿಲ್ಲ.

‘ನನಗೆ ಗೊತ್ತಿದೆ ನಿಮಗೆ ಕೋಪ ಬಂದಿದೆ ಹೌದೆ?’

‘ಇಲ್ಲವಲ್ಲ ನನಗೆ ಯಾಕೆ ಕೋಪ?’ ಅಮ್ಮ ನಕ್ಕರು. ‘ಅದರ ಬಗ್ಗೆ ನನಗಿಂತ ಹೆಚ್ಚು ಯಾರು ತಿಳಿದಿರಲು ಸಾಧ್ಯ? ’

‘ಇಲ್ಲ ಬಿಡು, ನೀನು ಹೋಗು. ಇಂಗ್ಲೆಂಡು ಸುತ್ತಾಡಿ ಬಾ. ಬಂದ ಮೇಲೆ ಆ ದೇಶವನ್ನು ಕುರಿತು ನನಗೆ ವರ್ಣಿಸಿ ಹೇಳು.’ ಅಮ್ಮ ನಿರುತ್ತರರಾದರು.

‘ಇವರು ಎಂದಿಗೂ ಹೀಗೆಯೆ. ತಮ್ಮ ನೋವು ನಿರಾಸೆಗಳನ್ನು ಒಳಗೇ ಮುಚ್ಚಿರಿಸಿಕೊಂಡು ಬೇರೊಬ್ಬರ ಸುಖದತ್ತ ಗಮನಕೊಡುವವರು...’

ಮಲಗುವ ಕೋಣೆಯ ಒಳಕೋಣೆಯಲ್ಲಿ ಬೆಳಕು ಕಂಡ ರಾಜೀವ ಬೇಗ ಬೇಗನೆ ನಡೆದು ಬಂದ. ಅಮ್ಮ ಇದೇನು ಮಾಡುತ್ತಿದ್ದಾಳೆ? ಹತ್ತಿರ ಸರಿದಂತೆ ಉರಿಯುತ್ತಿರುವ ಕಂತೆ ಕಂಡಿತು... ಕಾಗದಗಳು!

‘ಛೇ ಛೇ... ಏನಮ್ಮಾ ಇದು ನಿನ್ನ ಪಾಸ್‌ಪೋರ್ಟು, ಟಿಕೆಟ್ ಸುಟ್ಟು ಹಾಕ್ತಾ ಇದ್ದೀಯಲ್ಲ. ಎಂಥ ಕೆಲಸ ಮಾಡ್ತಾ ಇದ್ದೀಯ’, ಅತೀವ ನೋವಿನಿಂದ ಪೇಚಾಡಿದ. ಅಮ್ಮನಿಂದ ಉತ್ತರವೇ ಇಲ್ಲ.

ಮೋಹಿತನೊಂದಿಗೆ ಮಿಕ್ಕಿ ನಾಯಿಮರಿ ಕುಣಿಯುತ್ತ ಒಳಗೋಡಿ ಬಂತು. ಅಮ್ಮ ಮಾತ್ರ ತನ್ನೊಳಗೇ ಏನನ್ನೋ ಅಸ್ಪಷ್ಟವಾಗಿ ಹೇಳಿಕೊಳ್ಳುತ್ತ ಒಂದೇ ಗಮನದಲ್ಲಿ ಹಿಡಿಯಷ್ಟು ಕಾಗದಗಳನ್ನು ಸುಡುತ್ತಿದ್ದಾರೆ.

‘ಅಮ್ಮಾ...’ ರಾಜೀವ್ ಕರೆದ.

‘ಅಲ್ಲ ರಾಜು ಅವರನ್ನು ಇಲ್ಲೇ ಬಿಟ್ಟು ನಡಿ ಎಂದರೆ? ಅದು ಹೇಗೆ ಸಾಧ್ಯ? ನಾನು ಅವರನ್ನು ಇಲ್ಲಿ ಬಿಟ್ಟು ಹೇಗೆ ಹೋಗಲಿ...’

ಅಷ್ಟರಲ್ಲಿ ಅಲ್ಲಿ ಯಾರನ್ನೋ ಕಂಡಂತೆ ಮಗು ಮತ್ತು ಮಿಕ್ಕಿ ಇಬ್ಬರೂ ಧಾವಿಸುತ್ತ ಅತ್ತ ಓಡಿದರು.

ನಾಯಿ ರಭಸವಾಗಿ ಬಾಲ ಅಲ್ಲಾಡಿಸಿ ಎಗರೆಗರಿ ಬೊಗಳಿ ಕುಂಯಿಗುಟ್ಟಿ ಪ್ರೇಮ ಪ್ರದರ್ಶನ ಮಾಡಿತು. ‘ತಾತಾ...ತಾತಾ’ ಎನ್ನುತ್ತಿದ್ದಾನೆ ಮಗ.

ಆಶ್ಚರ್ಯ ಪರಮಾವಧಿಯನ್ನು ತಲುಪುತ್ತ ಆ ದಿಕ್ಕಿನ ಕಡೆ ನೋಡಿದ ರಾಜೀವ... ಏನಿದು? ತನ್ನ ಕಣ್ಣುಗಳನ್ನೇ ನಂಬಲಾಗುತ್ತಿಲ್ಲ ಏನು ನೋಡುತ್ತಿದ್ದೇನೆ ನಾನು? ಹಾಂ.. ಅಪ್ಪ! ಉರಿಯುವ ಬೆಂಕಿಯ ಬೆಳಕಿನಲ್ಲಿ ಕಂಡ ಆ ಆಕಾರ... ಅಪ್ಪನೇ ಅವರು!

ಕಣ್ಣೆದುರಲ್ಲೇ ಮೈದಳೆದಿದ್ದ ದೃಶ್ಯದ ಸತ್ಯಾಸತ್ಯತೆಗಳನ್ನು ನಿರ್ಧರಿಸಲಾಗದೆ ನಿಬ್ಬರೆಗಾಗಿ ನಿಂತುಕೊಂಡಿದ್ದಾನೆ ರಾಜೀವ. ದಮಯಂತಿ ತಪಸ್ಸಿನಲ್ಲಿದ್ದಂತೆ, ಧ್ಯಾನಕ್ಕೆ ಕುಳಿತವರಂತೆ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡು ನಿಶ್ಚಲರಾಗಿ ಕುಳಿತಿದ್ದರು.

‘ರಾಜೀವ್ ಹೊರಡುವ ತಯಾರಿ ಎಲ್ಲ ಆಯಿತಾ’ ಎನ್ನುತ್ತ ಒಳಗೆ ಬಂದ ಮನೋಹರನ ಮುಖದಲ್ಲೂ ಒಂದು ಪ್ರಶ್ನೆ ಅಚ್ಚೊತ್ತಿತ್ತು.

ಪ್ರತಿಕ್ರಿಯಿಸಿ: **feedback@sudha.co.in**